International Journal of Kannada Research 2023; 9(4): 162-167




International Journal of Kannada Research
www.kannadajournal.com

**ISSN: 2454–5813**
IJKR 2023; 9(4): 162-167
© 2023 IJKR
www.kannadajournal.com
Received: 05-10-2023
Accepted: 07-11-2023

**ಶ್ರೀಮತಿ ಗಾಯತ್ರಿ ಎಸ್. ಅಣ್ಣಿಗೇರಿ**
ಸಂಶೋಧನಾ ವಿದ್ಯಾರ್ಥಿ,
ಶ್ರೀನಿವಾಸ ವಿಶ್ವವಿದ್ಯಾಲಯ,
ಪಾಂಡೇಶ್ವರ ಮಂಗಳೂರು,
ಕರ್ನಾಟಕ, ಭಾರತ

**Corresponding Author:**
**ಶ್ರೀಮತಿ ಗಾಯತ್ರಿ ಎಸ್. ಅಣ್ಣಿಗೇರಿ**
ಸಂಶೋಧನಾ ವಿದ್ಯಾರ್ಥಿ,
ಶ್ರೀನಿವಾಸ ವಿಶ್ವವಿದ್ಯಾಲಯ,
ಪಾಂಡೇಶ್ವರ ಮಂಗಳೂರು,
ಕರ್ನಾಟಕ, ಭಾರತ

# ಧಾರವಾಡ ಜಿಲ್ಲೆಯ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೊಂದಿರುವ ಸಮಸ್ಯೆಗಳ ಕುರಿತು: ಒಂದು ಅಧ್ಯಯನ

**ಶ್ರೀಮತಿ ಗಾಯತ್ರಿ ಎಸ್. ಅಣ್ಣಿಗೇರಿ**

**ಪೀಠಿಕೆ**
ಅವಿಭಕ್ತ ಕುಟುಂಬ ಅಥವಾ ಜಂಟಿಕುಟುಂಬವು ಭಾರತದ ಸಾಮಾಜಿಕ ವ್ಯವಸ್ಥೆಯ ಅವಿಭಜನೀಯವಾದ ಅಂಗವಾಗಿದೆ. ಭಾರತೀಯ ಸಾಮಾಜಿಕ ವಿಕಾಸದಲ್ಲಿ ಕುಟುಂಬವೆಂದರೆ ಜಂಟಿ ಕುಟುಂಬವೇ ಆಗಿದೆ. ಅವಿಭಕ್ತ ಕುಟುಂಬವು ಅಸ್ತಿತ್ವಕ್ಕೆ ಬಂದಿರುವ ಕಾಲ ಘಟ್ಟವನ್ನು ನಿಖರವಾಗಿ ಗುರುತಿಸುವುದು ಕಷ್ಟ. ಕೇಂದ್ರ ಕುಟುಂಬಕ್ಕೆ ವಿರುದ್ಧವಾಗಿ ಇಲ್ಲಿ ತಂದೆ–ತಾಯಿ, ಮಕ್ಕಳು, ಮೊಮ್ಮಕ್ಕಳು ಮತ್ತು ಮರಿ–ಮೊಮ್ಮಕ್ಕಳು ಹೀಗೆ 3/4 ಕೆಲವೊಮ್ಮೆ 5 ತಲೆಮರಿಗೆ ಸೇರಿದ ವ್ಯಕ್ತಿಗಳು ಒಂದೇ ಕಡೆ ವಾಸಿಸುವರು. ಅವಿಭಕ್ತ ಕುಟುಂಬವೆಂಬ ಅಧಾರಶಿಲೆಯ ಮೇಲೆ ಹಿಂದೂ ಮೌಲ್ಯಗಳು ಮತ್ತು ಮನೋಭಾವನೆಗಳು ರೂಪುಗೊಂಡಿವೆ ಎಂದು ಹೇಳುವುದೂ ಇದೆ. ಸಾಂಪ್ರದಾಯಿಕ ಹಿಂದೂ ಸಂಸ್ಕೃತಿಯೊಂದಿಗೆ ಸಮರಸಗೊಂಡಿರುವ ಅವಿಭಕ್ತ ಕುಟುಂಬವು ದೇಶದ ಎಲ್ಲಾ ಮೂಲೆ–ಮೂಲೆಗಳಲ್ಲೂ ಇಂದಿಗೂ ಅಸ್ತಿತ್ವದಲ್ಲಿದೆ. ಈ ಕುಟುಂಬ ವ್ಯವಸ್ಥೆಗೆ ತನ್ನದೇ ಆದ ಸುದೀರ್ಘವಾದ ಇತಿಹಾಸವೂ ಇದೆ. ಒಟ್ಟಿನಲ್ಲಿ ಕನಿಷ್ಟ 3 ಅದಕ್ಕೂ ಹೆಚ್ಚಿನ ತಲೆಮಾರುಗಳಿಗೆ ಸೇರಿದ ರಕ್ತ ಸಂಬಂಧಿಗಳು ಒಬ್ಬ ವ್ಯಕ್ತಿಯ / ಪುರುಷ / ಸ್ತ್ರೀ ನೇತೃತ್ವದಲ್ಲಿ ದುಡಿಯುತ್ತಾ ಒಂದೇ ನಿವಾಸದಲ್ಲಿ ಒಂದೇ ಕುಟುಂಬದವರಂತೆ ಒಟ್ಟಿಗೆ ನೆಲೆಸಿರುವುದನ್ನು ಅವಿಭಕ್ತ ಕುಟುಂಬ ಎಂದು ಕರೆಯುವರು. ವಿಭಕ್ತ ಕುಟುಂಬ, ಅವಿಭಕ್ತ ಜುಟುಂಬದ ಹಾಗೇ 3/4 ತಲೆಮಾರಿನ ಸದಸ್ಯರನ್ನು ಒಳಗೊಂಡಿರುವುದಿಲ್ಲ, ಬದಲಾಗಿ ಕೇವಲ ಗಂಡ–ಹೆಂಡತಿ ಹಾಗೂ ಮಕ್ಕಳನ್ನೊಳಗೊಂಡ ಚಿಕ್ಕ ಗಾತ್ರದ ಕುಟುಂಬ. ಪ್ರಸ್ತುತ ಅಧ್ಯಯನಕ್ಕಾಗಿ ಧಾರವಾಡ ತಾಲೂಕಿನ 50 ಅವಿಭಕ್ತ ಹಾಗೂ 50 ವಿಭಕ್ತ ಕುಟುಂಬದ ಸದಸ್ಯರು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿದುಕೊಳ್ಳಲು ಪ್ರಶ್ನಾವಳಿಗಳ ಮೂಲಕ ಸಮೀಕ್ಷಾ ವಿಧಾನವನ್ನು ಅನುಸರಿಸಿ ದತ್ತಾಂಶಗಳನ್ನು ಸಂಗ್ರಹಿಸಲಾಯಿತು.

**ಕೀ ಪದಗಳು:** ಅವಿಭಕ್ತ ಕುಟುಂಬ, ವಿಭಕ್ತ ಕುಟುಂಬ, ಶೈಕ್ಷಣಿಕ ಸಮಸ್ಯೆಗಳು

**ಪೀಠಿಕೆ**

ಭಾರತೀಯ ಸಮಾಜದ ಒಂದು ವಿಶೇಷವೆನೆಂದರೆ ಇಲ್ಲಿ ಅವಿಭಕ್ತ ಕುಟುಂಬಗಳು ಹಾಗೂ ವಿಭಕ್ತ / ಕೇಂದ್ರ ಕುಟುಂಬಗಳೆಂಬ 2 ಪ್ರಕಾರದ ಕುಟುಂಬಗಳು ಅಸ್ತಿತ್ವದಲ್ಲಿರುವುದು. ಅವಿಭಕ್ತ ಕುಟುಂಬಗಳ ಅವಸಾನದೊಂದಿಗೆ ಕೇಂದ್ರ ಕುಟುಂಬಗಳು ವಿಕಾಸಗೊಳ್ಳುತ್ತಾ ಬಂದಂತಹ ಸ್ಥಿತಿ ಪಶ್ಚಿಮದಲ್ಲಿ ಸಾಮಾನ್ಯವಾಗಿದ್ದರೂ ಭಾರತದ ಪರಿಸ್ಥಿತಿ ಅದಕ್ಕಿಂತ ಭಿನ್ನ, ಆಧುನಿಕತೆಯ ಪ್ರಭಾವದಿಂದ ಕೇಂದ್ರ ಕುಟುಂಬಗಳು ಹೆಚ್ಚು ಜನಪ್ರೀಯವಾಗುತ್ತಿರುವುದರ ನಡುವೆಯೂ ಅವಿಭಕ್ತ ಕುಟುಂಬಗಳು ಇಂದಿಗೂ ತಮ್ಮ ಅಸ್ತಿತ್ವ ಉಳಿಸಿಕೊಂಡಿವೆ.

**ಸಾಹಿತ್ಯಾವಲೋಕನ**

- ಬರುವಾ ಎ.ಪಿ. (2008) "ವಿವಾಹಿತ ಮಹಿಳಾ ಶಿಕ್ಷಣ" SIE, ಅಸ್ಸಾಂವಿವಾಹಿತ ಮಹಿಳೆಯರಲ್ಲಿ ಶೈಕ್ಷಣಿಕ ಸಾಧನೆಯ ಮಟ್ಟವನ್ನು ಕಂಡುಹಿಯಲು ಪದವಿಪೂರ್ವ ವಿದ್ಯಾರ್ಥಿಗಳು ಸಾಮಾನ್ಯ ಉನ್ನತ ಶಿಕ್ಷಣದ ಕಡೆಗೆ ಅನುಕೂಲಕರವಾದ ಮನೋಭಾವವನ್ನು ತೋರಿಸಿದರು. ಮಹಿಳಾ ಶಿಕ್ಷಣವು ಅವರ ದಿನನಿತ್ಯದ ಮೇಲೆ ಯಾವುದೇ ಮಹತ್ವದ ಪ್ರಭಾವವನ್ನು ಬೀರಲಿಲ್ಲ.

- ಸ್ಟೆಫನಿಕ್ ಸ್ಪೆನ್ಸರ್(2009): "1950ರ ದಶಕದಲ್ಲಿ ಆರಂಭಿಕ ಶಾಲೆಯನ್ನು ಬಿಡುವ ಮತ್ತು ಆರಂಭಿಕ ವಿವಾಹದ ಅಪಾಯದಲ್ಲಿರುವ ಹುಡುಗಿಯರು" 1954ರಲ್ಲಿ ಮುಂಚಿತವಾಗಿ ಹೊರಡುವ ಸರ್ಕಾರದ ವರದಿಯ ಎಲ್ಲಾ ಸಾಮಾಜಿಕ ವರ್ಗಗಳ ಹುಡುಗಿಯರು ಕೋರ್ಸ್‌ನಲ್ಲಿ ಉಳಿಯದೆ ಇರುವ ಅಪಾಯವನ್ನು ಹೆಚ್ಚು ಎಂದು ಗಮನಿಸಿದೆ. ಕೆಳಗಿನ ಲೇಖನವು ಅಪಾಯದ ಸ್ವರೂಪವನ್ನು ಮೊದಲು ಚರ್ಚಿಸುತ್ತದೆ ಮತ್ತು ಹುಡುಗಿಯರಿಗೆ ಬಹುಶ: ಶಾಲೆಯಲ್ಲಿ ಉಳಿಯುವುದು ಮತ್ತು ಮದುವೆಯನ್ನು ವಿಳಂಬಿಸುವುದು, ಅಸಮಾನ ವೇತನ ಮತ್ತು ಅವಕಾಶಗಳು ರೂಢಿಯಲ್ಲಿರುವ ಸಮಯದಲ್ಲಿ ಮದುವೆ ಮತ್ತು ಅವಲಂಬನೆಯ ಸುರಕ್ಷತೆಗಿಂತ ಹೆಚ್ಚಿನ ಅಪಾಯವೆಂದು ಗ್ರಹಿಸಲಾಗಿದೆ ಎಂದು ಸೂಚಿಸುತ್ತದೆ.
- ಆಮಾಲ್ ಅಬ್ದಿ (2009): "ಸೋಮಾಲಿ ಗರ್ಲ್ಸ್ ಎಜುಕೇಶನ್" (ಖಖಕಂಃಂ ಯೋಜನೆ) ಪರಿಶೋಧಿಸಿದ ಈ ಗುಣಾತ್ಮಕ ಅಧ್ಯಯನವು, ಹೆಣ್ಣುಮಕ್ಕಳ ಶಿಕ್ಷಣದ ಕಡೆಗೆ ಸೊಮಾಲಿ–ಪೇರೆಂಟ್ಸ್‌ಗಳ ವರ್ತನೆಗಳು, ಹಾಗೆಯೇ ಸಾಂಸ್ಕೃತಿಕ, ಆರ್ಥಿಕ ಮಾನಸಿಕ ಮತ್ತು ವಯವಸ್ಥಾಪನಾ ಅಂಶಗಳು ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನು ಇನ್ನೂ ತಡೆಯುತ್ತವೆ. ಯೋಜನೆಯ ಭಾಗವಾಗಿರುವ ಕಾರ್ಯಕ್ರಮಕ್ಕೆ ತಿಳಿಸಲು ಈ ಅಧ್ಯಯನವನ್ನು ನಡೆಸಲಾಗಿದೆ.

## ಅಧ್ಯಯನದ ಉದ್ದೇಶಗಳು

1. **ಧಾರವಾಡ ಜಿಲ್ಲೆಯ ಅವಿಭಕ್ತ ಮತ್ತು ವಿಭಕ್ತ ಕುಟುಂಬದ ಸದಸ್ಯರ ಶಿಕ್ಷಣದ ಬಗ್ಗೆ ತಿಳಿದುಕೊಳ್ಳುವುದು.**

- ಧಾರವಾಡ ಜಿಲ್ಲೆಯ ಅವಿಭಕ್ತ ಮತ್ತು ವಿಭಕ್ತ ಕುಟುಂಬದ ಸದಸ್ಯರ ಆರ್ಥಿಕ ಸ್ಥಿತಿಯನ್ನು ಅರಿತುಕೊಳ್ಳುವುದು.

## ಅಧ್ಯಯನದ ಸಮಸ್ಯೆಯ ಹೇಳಿಕೆ

**ಧಾರವಾಡ ಜಿಲ್ಲೆಯ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೊಂದಿರುವ ಸಮಸ್ಯೆಗಳ ಕುರಿತು ಒಂದು ಅಧ್ಯಯನ.**

## ಸಂಶೋಧನಾ ವಿಧಾನ

ಈ ಅಧ್ಯಯನವು ಧಾರವಾಡ ಜಿಲ್ಲೆಯ ಐದು ತಾಲೂಕುಗಳಲ್ಲಿ ಕಂಡುಬರುವ ಅವಿಭಕ್ತ ಮತ್ತು ವಿಭಕ್ತ ಕುಟುಂಬ ಭೇಟಿ ನೀಡಿ ಸಮೀಕ್ಷಾ ವಿಧಾನದಿಂದ ಪ್ರಶ್ನಾವಳಿಗಳ ಮೂಲಕ ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳಿಗೆ ಸಂಬಂಧಿಸಿದಂತೆ ಮಾಹಿತಿದಾರರ ಕುಟುಂಬದ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸಲಾಯಿತು.

## ಮಾದರಿ ಆಯ್ಕೆ

ಸಂಶೋಧನ ಅಧ್ಯಯನಕ್ಕೆ ಮಾಹಿತಿಯನ್ನು ಸಂಗ್ರಹಿಸಲು ಸರಳ ಯಾದೃಚ್ಛಿಕ (ರ್‍ಯಾಂಡಮ್) ಮಾದರಿಯ ವಿಧಾನವನ್ನು ಅನುಸರಿಸಲಾಯಿತು. ಧಾರವಾಡ ಜಿಲ್ಲೆಯ ಐದು ತಾಲೂಕುಗಳಲ್ಲಿ ವಾಸಿಸುತ್ತಿರುವ 50 ಅವಿಭಕ್ತ ಮತ್ತು 50 ವಿಭಕ್ತ ಕುಟುಂಬಗಳಿಂದ ಮಾಹಿತಿ ಸಂಗ್ರಹಿಸಲಾಯಿತು.

## ಅಧ್ಯಯನದ ಇತಿಮಿತಿಗಳು

- ಈ ಅಧ್ಯಯನವು ಧಾರವಾಡ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ.
- ಪ್ರಸ್ತುತ ಅಧ್ಯಯನವು ಧಾರವಾಡ ಜಿಲ್ಲೆಯ ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳಿಗೆ ಮಾತ್ರ ಸಂಬಂಧಿಸಿದೆ.
- ಈ ಅಧ್ಯಯನವು ಧಾರವಾಡ ಜಿಲ್ಲೆಯ 100 ಕುಟುಂಬಗಳಿಗೆ ಸೀಮಿತವಾಗಿದೆ.

## ಸಂಖ್ಯಾಶಾಸ್ತ್ರೀಯ ತಂತ್ರಗಳು

ಪ್ರಸುತ್ತ ಅಧ್ಯಯನದಲ್ಲಿ ಅವಿಭಕ್ತ ಮತ್ತು ವಿಭಕ್ತ ಕುಟುಂಬದ ಸದಸ್ಯರು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಎದುರಿಸುತ್ತಿರುವ ಸಮಸ್ಯೆಗಳನ್ನು ಸಂಗ್ರಹಿಸಲು ಸಂಶೋಧಕರು ಮಾರ್ಗದರ್ಶಕರ ಸಲಹೆಯ ಮೇರೆಗೆ ಪರಿಷ್ಕರಣೆ ಮಾಡಿದ ಸ್ವರಚಿತ ಪ್ರಶ್ನಾವಳಿಯನ್ನು ಸಿದ್ಧಪಡಿಸಿ ಸಮೀಕ್ಷಾ ವಿಧಾನದ ಮೂಲಕ ಧಾರವಾಡ ಶಹರದ ಆಯ್ಕೆ 50 ಅವಿಭಕ್ತ ಕುಟುಂಬ ಹಾಗೂ 50 ವಿಭಕ್ತ ಕುಟುಂಬಗಳಿಗೆ ನೀಡಿ ಅವರಿಂದ ಬಂದ ಉತ್ತರಗಳನ್ನು ಅಥವಾ ಅಭಿಪ್ರಾಯಗಳನ್ನು ಪ್ರತಿಪ್ರಶ್ನೆಗಳಿಗೆ ಶೇಕಡಾವಾರು ಹಾಗೂ ಸಹಸಂಬಂಧವನ್ನು ವಿಶ್ಲೇಷಿಸಲಾಗಿದೆ.

## ಸಂಶೋಧನಾ ಅಧ್ಯಯನದ ವಿಶ್ಲೇಷಣೆ

**ಕುಟುಂಬದಲ್ಲಿನ ಎಲ್ಲಾ ಸದಸ್ಯರು ಶಿಕ್ಷಿತರಾಗಿದ್ದಾರೆಯೇ?**

**ಕೋಷ್ಟಕ 1:** ಕುಟುಂಬದಲ್ಲಿನ ಎಲ್ಲಾ ಸದಸ್ಯರು ಶಿಕ್ಷಿತರಾಗಿದ್ದಾರೆಯೇ ಎಂಬುವ ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 11 (73.3) | 12 (80) |
| No | 4 (26.7) | 3 (20) |
| Total | 15 (100) | 15 (100) |

ಆವರಣ ದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ.

ಮೇಲಿನ ಕೋಷ್ಟಕ 1 ರಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಕುಟುಂಬದಲ್ಲಿನ ಎಲ್ಲಾ ಸದಸ್ಯರು ಶಿಕ್ಷಿತರಾಗಿದ್ದಾರೆಯೇ ಎಂಬ ಹೇಳಿಕೆಗೆ ಪ್ರತಿಕ್ರಿಯೆ ಇದೆ. ಮೇಲಿನ ಹೇಳಿಕೆಯು ಉದ್ದೇಶ–1 ನ್ನು ಉದ್ದೇಶಿಸಿದೆ.

ಅವಿಭಕ್ತ ಕುಟುಂಬದ 73.3%ದಷ್ಟು ಜನರು ಹೌದು ಎಂಬುದಾಗಿಯೂ, 26.7%ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರಿಯಿಸಿದ್ದಾರೆ. ಹಾಗೆಯೇ ವಿಭಕ್ತ ಕುಟುಂಬದ ಸದಸ್ಯರುಗಳಲ್ಲಿ 80%ದಷ್ಟು ಜನರು ಹೌದು ಎಂಬುದಾಗಿಯೂ ಹಾಗೂ 20%ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರಿಯೆಸಿದ್ದಾರೆ.

ಮೇಲಿನ ಸಾಂಖೀಕ ವಿಶ್ಲೇಷಣೆಯಿಂದ ಒಟ್ಟಾರೆ ತಿಳಿದು ಬರುವುದೆನೆಂದರೆ ಎರಡು ಕುಟುಂಬಗಳಲ್ಲಿನ ಸದಸ್ಯರು ಪ್ರತಿಕ್ರಿಯೆ ಈ ಹೇಳಿಕೆಗೆ ಸಂಬಂಧಿಸಿದಂತೆ ಕ್ರಮವಾಗಿ 73.3% ಹಾಗೂ 80% ಹೆಚ್ಚಾಗಿರುವುದು ಕುಟುಂಬದಲ್ಲಿನ ಸದಸ್ಯರು ಅವಿಭಕ್ತ ಕುಟುಂಬದ ಸದಸ್ಯರಿಗಿಂತ ಹೆಚ್ಚು ಶಿಕ್ಷಿತರಾಗಿರುವುದು ಕಾಣುತ್ತದೆ.

**2. ನಿಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವಿರಾ?**

**ಕೋಷ್ಟಕ 2:** ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವಿರಾ ಎಂಬುವ ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 11 (73.3) | 15 (100) |
| No | 4 (26.7) | – |
| Total | 15 (100) | 15 (100) |

ಆವರಣದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ.

ಮೇಲಿನ ಕೋಷ್ಟಕ 2ರಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ನಿಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವಿರಾ ಎಂಬ ಹೇಳಿಕೆಗೆ ಪ್ರತಿಕ್ರಿಯೆ ಇದೆ.

ಅವಿಭಕ್ತ ಕುಟುಂಬದ 73.3% ದಷ್ಟು ಜನರು ಹೌದು ಎಂಬುದಾಗಿಯೂ 26.7%ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರಿಯೆಸಿದ್ದಾರೆ. ಹಾಗೆಯೇ ವಿಭಕ್ತ ಕುಟುಂಬದ ಸದಸ್ಯರುಗಳಲ್ಲಿ 100% ದಷ್ಟು ಜನರು ಹೌದು ಎಂಬುದಾಗಿಯೂ ಪ್ರತಿಕ್ರಿಯೆಸಿದ್ದಾರೆ.

ಮೇಲಿನ ಸಾಂಖೀಕ ವಿಶ್ಲೇಷಣೆಯಿಂದ ಒಟ್ಟಾರೆ ತಿಳಿದು ಬರುವುದೆನೆಂದರೆ ಎರಡು ಕುಟುಂಬಗಳಲ್ಲಿನ ಸದಸ್ಯರ ಪ್ರತಿಕ್ರಿಯೆ ಈ ಹೇಳಿಕೆಗೆ ಸಂಬಂಧಿಸಿದಂತೆ ಕ್ರಮವಾಗಿ 73.3% ಹಾಗೂ 100% ಹೆಚ್ಚಾಗಿರುವುದು ಕಂಡುಬರುತ್ತದೆ. ಗಂಡು ಮಕ್ಕಳ ಸಮಾನವಾಗಿ ಹೆಣ್ಣುಮಕ್ಕಳು ಸಹ ಶಿಕ್ಷಣ ಪಡೆಯಬೇಕು ಎಂಬುದು ಕಂಡುಬರುತ್ತದೆ. ಆದಾಗ್ಯೂ ಸಹ ವಿಭಕ್ತ ಕುಟುಂಬದಲ್ಲಿನ ಸದಸ್ಯರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಪೂರ್ಣ ಆದ್ಯತೆಯನ್ನು ನೀಡಿದ್ದಾರೆ.

**3. ಶಿಕ್ಷಣ ಏಕೆ ಕೊಡಿಸುವಿರಿ?**

1. ನೌಕರಿಯ ಸಲುವಾಗಿ
2. ಒಬ್ಬ ಒಳ್ಳೆಯ ನಾಗರಿಕನಾಗಲು

**ಕೋಷ್ಟಕ 3:** ಶಿಕ್ಷಣ ಏಕೆ ಕೊಡಿಸುವಿರಿ ಎಂಬುವ ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 15 (100) | 15 (100) |
| No | – | – |
| Total | 15 (100) | 15 (100) |

# ಆವರಣದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ

ಮೇಲಿನ ಕೋಷ್ಟಕ 3ರಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಶಿಕ್ಷಣ ಏಕೆ ಕೊಡಿಸುವಿರಿ ಎಂಬ ಹೇಳಿಕೆಗೆ ಪ್ರತಿಕ್ರಿಯೆ ಇದೆ. ಮೇಲಿನ ಹೇಳಿಕೆಯು ಉದ್ದೇಶ–3 ನ್ನು ಉದ್ದೇಶಿಸಿದೆ.

ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಪ್ರತಿಶತ 100% ಜನರು ಹೌದು ಎಂಬುದಾಗಿಯೂ ಪ್ರತಿಕ್ರಿಯೆಸಿದ್ದಾರೆ.

ಮೇಲಿನ ಸಾಂಖೀಕ ವಿಶ್ಲೇಷಣೆಯಿಂದ ಒಟ್ಟಾರೆ ತಿಳಿದುಬರುವುದೆನೆಂದರೆ ಎರಡು ಕುಟುಂಬಗಳಲ್ಲಿ ಸದಸ್ಯರ ಪ್ರತಿಕ್ರಿಯೆ ಈ ಹೇಳಿಕೆಗೆ ಸಂಬಂಧಿಸಿದಂತೆ 100% ದಷ್ಟು ಸಂಪೂರ್ಣವಾಗಿದ್ದು ಒಬ್ಬ ಒಳ್ಳೆಯ ನಾಗರಿಕರಾಗಬೇಕೆಂದು ತಮ್ಮ ಹೆಣ್ಣ ಮಕ್ಕಳಿಗೆ ಶಿಕ್ಷಣ ಕೊಡಿಸುವ ನಿರ್ಧಾರಮಾಡಿರುವುದು ವ್ಯಕ್ತವಾಗುತ್ತದೆ.

**4. ನಿಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಮರ್ಥರಾಗಿದ್ದಿರಾ?**

**ಕೋಷ್ಟಕ 4:** ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಮರ್ಥರಾಗಿದ್ದೀರಾ ಎಂಬುವ ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 11(73.3) | 14(93.3) |
| No | 4(26.7) | 1(6.7) |
| Total | 15(100) | 15(100) |

# ಆವರಣದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ.

ಮೇಲಿನ ಕೋಷ್ಟಲ 4ರಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ನಿಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಮರ್ಥರಾಗಿದ್ದೀರಾ ಎಂಬ ಹೇಳಿಕೆಗೆ ಪ್ರತಿಕ್ರಿಯೆ ಇದೆ.

ಅವಿಭಕ್ತ ಕುಟುಂಬದ 73.3% ದಷ್ಟು ಜನರು ಹೌದು ಎಂಬುದಾಗಿಯೂ 26.7%ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರಿಯೆಸಿದ್ದಾರೆ. ಹಾಗೆಯೇ ವಿಭಕ್ತ ಕುಟುಂಬದ ಸದಸ್ಯರುಗಳಲ್ಲಿ 93.3%ದಷ್ಟು ಜನರು ಹೌದಾಗಿಯೇ ಹಾಗೂ 6.7%ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರಿಯೆಸಿದ್ದಾರೆ.

ಮೇಲಿನ ಸಾಂಖಿಕ ವಿಶ್ಲೇಷಣೆಯಿಂದ ಒಟ್ಟಾರೆ ತಿಳಿದು ಬರುವುದೇನೆಂದರೆ ಎರಡು ಕುಟುಂಬಗಳಲ್ಲಿನ ಸದಸ್ಯರ ಪ್ರತಿಕ್ರೀಯೆ ಈ ಹೇಳಿಕೆಗೆ ಸಂಬಂಧಿಸಿದಂತೆ ಕ್ರಮವಾಗಿ 73.3% ಹಾಗೂ 93.3% ಹೆಚ್ಚಾಗಿರುವುದು ಕಂಡು ಬರುತ್ತದೆ. ಎಂದರೆ ಕುಟುಂಬ ಅವಿಭಕ್ತವಾಗಿರಲಿ, ವಿಭಕ್ತವಾಗಿರಲಿ ಅಲ್ಲಿನ ಸದಸ್ಯರು ಹೆಣ್ಣು ಮಕ್ಕಳಿಗೆ ಶೀಕ್ಷಣ ಕೊಡಿಸಲು ಹೆಚ್ಚು ಸಮರ್ಥವಾಗಿರುವುದು ಕಂಡು ಬರುತ್ತದೆ. ಆದಾಗ್ಯೂ ಸಹ ವಿಭಕ್ತ ಕುಟುಂಬದಲ್ಲಿನ ಸದಸ್ಯರು ಅವಿಭಕ್ತ ಕುಟುಂಬದಲ್ಲಿನ ಸದಸ್ಯರಿಗಿಂತ ಹೆಚ್ಚು ಸಮರ್ಥವಾಗಿರುವುದು ಕಂಡು ಬರುತ್ತದೆ. ಕುಟುಂಬಗಳಲ್ಲಿ ಶಿಕ್ಷಣದ ಬಗ್ಗೆ ಸರಿಯಾದ ತಿಳುವಳಿಕೆ ಪಾಲಕರು ಹೊಂದಿರುವುದು ಇದರಿಂದ ವ್ಯಕ್ತವಾಗುತ್ತದೆ.

**ಕೋಷ್ಟಕ 5 :** ನಿಮ್ಮ ಹೆಣ್ಣು ಮಕ್ಕಳಿಗೆ ಎಲ್ಲ ಹಂತದ ಶಿಕ್ಷಣವು ಸುಲಭಾಗಿ ಸಿಗುತ್ತಿದೆಯೇ ಎಂಬುವ ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 11 (73.3) | 13 (86.6) |
| No | 4 (26.7) | 2 (13.4) |
| Total | 15 (100) | 15 (100) |

ಆವರಣದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ

ಮೇಲಿನ ಕೋಷ್ಟಕ 5 ರಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ನಿಮ್ಮ ಹೆಣ್ಣು ಮಕ್ಕಳಿಗೆ ಎಲ್ಲ ಹಂತ್ ಶೀಕ್ಷಣವು ಸುಲಭವಾಗಿ ಸಿಗುತ್ತಿದೆಯೇ ಎಂಬ ಹೇಳಿಕೆಗೆ ಪ್ರತಿಕ್ರಿಯೆ ಇದೆ.

ಅವಿಭಕ್ತ ಕುಟುಂಬದ 73.3% ದಷ್ಟು ಜನರು ಹೌದು ಎಂಬುದಾಗಿಯೂ 26.7% ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರಿಯಿಸಿದ್ದಾರೆ. ಹಾಗೆಯೇ ವಿಭಕ್ತ ಕುಟುಂಬದ ಸದಸ್ಯರುಗಳಲ್ಲಿ 86.6% ದಷ್ಟು ಜನರು ಹೌದಾಗಿಯೂ ಹಾಗೂ 13.4% ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರಿಯಿಸಿದ್ದಾರೆ.

ಮೇಲಿನ ಸಾಂಖೀಕ ವಿಶ್ಲೇಷಣೆಯಿಂದ ಒಟ್ಟಾರೆ ತಿಳಿದುಬರುವುದೇನೆಂದರೆ 2 ಕುಟುಂಬಗಳಲ್ಲಿನ ಸದಸ್ಯರ ಪ್ರತಿಕ್ರಿಯೆ ಈ ಹೇಳಿಕೆಗೆ ಸಂಬಂಧಿಸಿದಂತೆ ಕ್ರಮವಾಗಿ 73.3% ಹಾಗೂ 86.6% ಹೆಚ್ಚಾಗಿರುವುದು. ಅವಿಭಕ್ತ ಕುಟುಂಬಗಳು ಇನ್ನೂ ಮೂಲ ಉದ್ಯೋಗಗಳಿಗೆ ಅವಲಂಬಿತವಾಗಿರುವುದರಿಂದ ವಿಭಕ್ತ ಕುಟುಂಬದ ಸದಸ್ಯರಿಗಿಂತ ಸ್ವಲ್ಪ ಕಡಿಮೆ ಪ್ರತಿಶತದಷ್ಟು ತಮ್ಮ ಹೆಣ್ಣು ಮಕ್ಕಳಿಗೆ ಎಲ್ಲಾ ಹಂತದ ಶಿಕ್ಷಣವನ್ನು ಸುಲಭವಾಗಿ ನೀಡಲು ಆಗುತ್ತಿಲ್ಲ ಎಂದು ತಿಳಿಸಿದ್ದಾರೆ. ಆದರೂ ಸಹ ಕುಟುಂಬದ ಸದಸ್ಯರುಗಳಲ್ಲಿ ಶಿಕ್ಷಣದ ಅರಿವನ್ನು ಕಾಣಬಹುದು.

### 6. ಶಿಕ್ಷಣದಿಂದ ಹೆಣ್ಣು ಮಕ್ಕಳ ಸರ್ವತೋಮುಖ ಅಭಿವೃದ್ಧಿ ಸಾಧ್ಯವೇ?

**ಕೋಷ್ಟಕ 6:** ಶಿಕ್ಷಣದಿಂದ ಹೆಣ್ಣು ಮಕ್ಕಳ ಸರ್ವತೋಮುಖ ಅಭಿವೃದ್ಧಿ ಸಾಧ್ಯವೇ ಎಂಬುವ ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 11(73.3) | 15 (10.0) |
| No | 4 (26.7) | – |
| Total | 15 (100) | 15 (100) |

ಆವರಣದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ

ಮೇಲಿನ ಕೋಷ್ಟಕ 6 ರಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಶಿಕ್ಷಣದಿಂದ ಹೆಣ್ಣೂ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಸಾಧ್ಯವೇ ಎಂಬ ಹೇಳಿಕೆಗೆ ಪ್ರತಿಕ್ರಿಯೆ ಇದೆ.

ಅವಿಭಕ್ತ ಕುಟುಂಬದ 73.3% ದಷ್ಟು ಜನರು ಹೌದು ಎಂಬುದಾಗಿಯೂ 26.7% ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರಿಯಿಸಿದ್ದಾರೆ. ಹಾಗೆಯೇ ವಿಭಕ್ತ ಕಟುಂಬದ ಸದಸ್ಯರುಗಳಲ್ಲಿ 100% ದಷ್ಟು ಜನರು ಹೌದು ಎಂಬುದಾಗಿಯೂ ಪ್ರತಿಕ್ರಿಯಿಸಿದ್ದಾರೆ.

ಮೇಲಿನ ಸಾಂಖೀಕ ವಿಶ್ಲೇಷಣೆಯಿಂದ ಒಟ್ಟಾರೆ ತಿಳಿದುಬರುವುದೇನೆಂದರೆ ಎರಡು ಕುಟುಂಬಗಳಲ್ಲಿನ ಸದಸ್ಯೆರ ಪ್ರತಿಕ್ರಿಯೆ ಈ ಹೇಳಿಕೆಗೆ ಸಮಬಂಧಿಸಿದಂತೆ ಕ್ರಮವಾಗಿ 73.3% ಹಾಗೂ 100% ಹೆಚ್ಚಾಗಿರುವುದು ಕಂಡುಬರುತ್ತದೆ. ಕುಟುಂಬದ ಸದಸ್ಯರು ಶಿಕ್ಷಣದ ಮಹತ್ವವನ್ನು ತಿಳಿದುಕೊಂಡಿದ್ದು ಶಿಕ್ಷಣದಿಂದ ಹೆಣ್ಣು ಮಕ್ಕಳ ಸರ್ವತೋಮುಖ ಅಭಿವೃಧ್ಧಿ ಸಾಧ್ಯ ಎಂಬ ಅಭಿಪ್ರಾಯ ಹೊಂದಿರುವುದನ್ನು ಕಾಣುತ್ತೇವೆ.

### 7. ಹೆಣ್ಣು ಮಕ್ಕಳಿಗೆ ಕೇವಲ ಸಾಮಾನ್ಯ ಶಿಕ್ಷಣದ ಕೋರ್ಸುಗಳಾದ ಬಿ.ಎ., ಬಿ.ಕಾಂ., ಬಿ.ಎಸ್ಸಿ., ಅಷ್ಟೇ ನೀಡಬೇಕೇ?

**ಕೋಷ್ಟಕ 7:** ಹೆಣ್ಣು ಮಕ್ಕಳಿಗೆ ಕೇವಲ ಸಾಮಾನ್ಯ ಶಿಕ್ಷಣದ ಕೋರ್ಸುಗಳಾದ ಬಿ.ಎ., ಬಿ.ಕಾಂ., ಬಿ.ಎಸ್ಸಿ. ಅಷ್ಟೇ ನೀಡಬೇಕೇ ಎಂಬುದ ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 4(26.7) | 2(13.33) |
| No | 11(73.3) | 13(86.67) |
| Total | 15(100) | 15(100) |

ಆವರಣದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ

ಮೇಲಿನ ಕೋಷ್ಟಕ 7 ರಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಹೆಣ್ಣು ಮಕ್ಕಳಿಗೆ ಕೇವಲ ಸಾಮಾನ್ಯ ಶಿಕ್ಷಣದ ಕೋರ್ಸುಗಳಾದ ಬಿ.ಎ., ಬಿ.ಕಾಂ., ಬಿ.ಎಸ್ಸಿ. ಅಷ್ಟೇ ನೀಡಬೇಕೇ ಎಂಬ ಹೇಳಿಕೆಗೆ ಪ್ರತಿಕ್ರೀಯೆ ಇದೆ.

ಅವಿಭಕ್ತ ಕುಟುಂಬದ 26.7% ದಷ್ಟು ಜನರು ಹೌದು ಎಂಬುದಾಗಿಯೂ 73.3% ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರೀಯಿಸಿದ್ದಾರೆ. ಹಾಗೆಯೇ ವಿಭಕ್ತ ಕುಟುಂಬದ ಸದಸ್ಯರುಗಳಲ್ಲಿ 13.33% ದಷ್ಟು ಜನರು ಹೌದು ಎಂಬುದಾಗಿಯೂ 86.67% ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರಿಯಿಸಿದ್ದಾರೆ.

ಮೇಲಿನ ಸಾಂಖೀಕ ವಿಶ್ಲೇಷಣೆಯಿಂದ ಒಟ್ಟಾರೆ ತಿಳಿದುಬರುವುದೇನೆಂದರೆ ಎರಡು ಕುಟುಂಬದಲ್ಲಿನ ಸದಸ್ಯರ ಪ್ರತಿಕ್ರಿಯೆ ಈ ಹೇಳಿಕೆಗೆ ಸಂಬಂಧಿಸಿದಂತೆ ಕ್ರಮವಾಗಿ 73.3% ಹಾಗೂ 86.67% ದಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ. ಎರಡು ಕುಟುಂಬದ ಸದಸ್ಯರು ಹೆಣ್ಣು ಮಕ್ಕಳು ಸಹ ಗಂಡು ಮಕ್ಕಳಂತೆ ಉನ್ನತ ಹಾಗೂ ವೃತ್ತಿ ಶಿಕ್ಷಣದ ಕೋರ್ಸುಗಳನ್ನು ಪಡೆಯಬೇಕು ಎಂಬ ಆಸೆ ಇಟ್ಟುಕೊಂಡಿರುವುದು ಕಾಣುತ್ತೇವೆ. ವಿಭಕ್ತ ಕುಟುಂಬದ ಸದಸ್ಯರು ಹೆಚ್ಚು ಆಸೆ ಹೊಂದಿದ್ದಾರೆ.

### 8: ಶಿಕ್ಷಣ ಪಡೆಯುವದರಿಂದ ನಿಮ್ಮ ಹೆಣ್ಣು ಮಕ್ಕಳು ನಿಮ್ಮ ಕನಸನ್ನು ನನಸಾಗಿಸುವರೇ?

**ಕೋಷ್ಟಕ 8:** ಶಿಕ್ಷಣ ಪಡೆಯುವದರಿಂದ ನಿಮ್ಮ ಹೆಣ್ಣು ಮಕ್ಕಳು ನಿಮ್ಮ ಕನಸನ್ನು ನನಸಾಗಿಸುವರೇ ಎಂಬುವ ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 11(73.3) | 15(100) |
| No | 4(26.7) | – |
| Total | 15(100) | 15(100) |

ಆವರಣದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ

ಮೇಲಿನ ಕೋಷ್ಟಕ 8 ರಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಶಿಕ್ಷಣ ಪಡೆಯುವುದರಿಂದ ನಿಮ್ಮ ಹೆಣ್ಣು ಮಕ್ಕಳು ನಿಮ್ಮ ಕನಸನ್ನು ನನಸಾಗಿಸುವರೇ ಎಂಬ ಹೇಳಿಕೆಗೆ ಪ್ರತಿಕ್ರಿಯೆ ಇದೆ.

ಅವಿಭಕ್ತ ಕುಟುಂಬದ 73.3% ದಷ್ಟು ಜನರು ಹೌದು ಎಂಬುದಾಗಿಯೂ 26.7% ದಷ್ಟು ಜನರು ಇಲ್ಲ ಎಂಬುದಾಗಿಯೂ ಹಾಗೂ ವಿಭಕ್ತ ಕುಟುಂಬದ ಸದಸ್ಯರು 100% ದಷ್ಟು ಜನರು ಹೌದು ಎಂಬುದಾಗಿಯೂ ಪ್ರತಿಕ್ರಿಯಿಸಿದ್ದಾರೆ.

ಮೇಲಿನ ಸಾಂಖೀಕ ವಿಶ್ಲೇಷಣೆಯಿಂದ ಒಟ್ಟಾರೆ ತಿಳಿದುಬರುವುದೇನೆಂದರೆ ಎರಡು ಕುಟುಂಬಗಳಲ್ಲಿನ ಸದಸ್ಯರ ಪ್ರತಿಕ್ರಿಯೆ ಈ ಹೇಳಿಕೆಗೆ ಸಂಬಂಧಿಸಿದಂತೆ ಕ್ರಮವಾಗಿ 73.3% ಹಾಗೂ 100% ಹೆಚ್ಚಾಗಿರುವುದು ಕಂಡು ಬರುತ್ತದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ತಮ್ಮ ಕನಸನ್ನು ನನಸಾಗಿಸುವರು ಎಂಬ ಆಕಾಂಕ್ಷೆಯನ್ನು ಇಟ್ಟುಕೊಂಡಿರುವುದನ್ನು ಎರಡು ಕುಟುಂಬಗಳಲ್ಲಿ ಕಾಣಬಹುದು. ಅದರಲ್ಲೂ ವಿಭಕ್ತ ಕುಟುಂಬದ ಸದಸ್ಯರು ಸಂಪೂರ್ಣ ಆಕಾಂಕ್ಷೆ ಹೊಂದಿದ್ದಾರೆ.

### 9. ನಿಮಗೆ ಹಣದ ತೊಂದರೆಯಾದಾಗ ಮಗಳನ್ನು ಶಾಲೆ ಬಿಡಿಸಿ ಕೆಲಸಕ್ಕೆ ಕಳುಹಿಸುತ್ತೀರಾ?

**ಕೋಷ್ಟಕ 9 :** ನಿಮಗೆ ಹಣದ ತೊಂದರೆಯಾದಾಗ ಮಗಳನ್ನು ಶಾಲೆ ಬಿಡಿಸಿ ಕೆಲಸಕ್ಕೆ ಕಳುಹಿಸುತ್ತೀರಾ ಎಂಬುವ ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 4(26.7) | 1(6.7) |
| No | 11(73.3) | 14(93.3) |
| Total | 15(100) | 15(100) |

ಆವರಣದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ

ಮೇಲಿನ ಕೋಷ್ಟಕ 9 ರಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಕುಟುಂಬದಲ್ಲಿ ಹಣದ ತೊಂದರೆಯಾದಾಗ ಮಗಳನ್ನು ಶಾಲೆ ಬಿಡಿಸಿ ಕೆಲಸಕ್ಕೆ ಕಳುಹಿಸುತ್ತೀರಾ ಎಂಬ ಹೇಳಿಕೆಗೆ ಪ್ರತಿಕ್ರಿಯೆ ಇದೆ. ಮೇಲಿನ ಹೇಳಿಕೆಯು ಉದ್ದೇಶ–2 ನ್ನು

ಉದ್ದೇಶಿಸಿದೆ.

ಅವಿಭಕ್ತ ಕುಟುಂಬದ 26.7% ದಷ್ಟು ಜನರು ಹೌದು ಎಂದು 73.3% ದಷ್ಟು ಜನರು ಇಲ್ಲ ಎಂಬುದಾಗಿಯೂ ಹಾಗೆಯೇ ವಿಭಕ್ತ ಕುಟುಂಬದ 6.7% ದಷ್ಟು ಜನರು ಹೌದು ಎಂದು ಹಾಗೂ 93.3% ದಷ್ಟು ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರಿಯಿಸಿದ್ದಾರೆ.

ಮೇಲಿನ ಸಾಂಖೀಕ ವಿಶ್ಲೇಷಣೆಯಿಂದ ಒಟ್ಟಾರೆ ತಿಳಿದು ಬರುವುದೇನೆಂದರೆ ಎರಡು ಕುಟುಂಬಗಳಲ್ಲಿನ ಸದಸ್ಯರ ಪ್ರತಿಕ್ರಿಯೆ ಈ ಹೇಳಿಕೆಗೆ ಸಂಬಂಧಿಸಿದಂತೆ ಕ್ರಮವಾಗಿ 26.7% ದಷ್ಟು ಹಾಗೂ 6.7% ದಷ್ಟು ಸದಸ್ಯರು ತಮಗೆ ಹಣದ ತೊಂದರೆಯಾದಾಗ ಮಗಳನ್ನು ಶಾಲೆ ಬಿಡಿದಿ ಕೆಲಸಕ್ಕೆ ಕಳುಹಿಸುತ್ತಾರೆ. ಕಾರಣ ಬಡತನ ಹಾಗೂ ಕೆಲಸದ ಒತ್ತಡದಿಂದಾಗಿ ಅವರ ಮಕ್ಕಳ ಸಹಾಯ ಪಡೆಯುತ್ತಿದ್ದಾರೆ.

### 10. ಶಾಲಾ ಅವಧಿಯಲ್ಲಿ ಹೆಣ್ಣು ಮಕ್ಕಳಿಗೆ ಮನೆಗೆಲಸ ಹೇಳುವಿರಾ?

**ಕೋಷ್ಟಕ 10:** ಶಾಲಾ ಅವಧಿಯಲ್ಲಿ ಹೆಣ್ಣು ಮಕ್ಕಳಿಗೆ ಮನೆಗೆಲಸ ಹೇಳುವಿರಾ ಎಂಬುದನ್ನು ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 4(26.7) | 1(6.7) |
| No | 11(73.3) | 14(93.3) |
| Total | 15(100) | 15(100) |

ಆವರಣದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ

ಮೇಲಿನ ಕೊಷ್ಟಕ 10 ರಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಶಾಲಾ ಅವಧಿಯಲ್ಲಿ ಹೆಣ್ಣು ಮಕ್ಕಳಿಗೆ ಮನೆಗೆಲಸ ಹೇಳುವಿರಾ ಎಂಬ ಹೇಳಿಕೆಗೆ ಪ್ರತಿಕ್ರಿಯೆ ಇದೆ.

ಅವಿಭಕ್ತ ಕುಟುಂಬದ 26.7% ದಷ್ಟು ಜನರು ಹೌದು ಎಂದು 73.3% ದಷ್ಟು ಜನರು ಇಲ್ಲ ಎಂಬುದಾಗಿಯೂ ಹಾಗೆಯೇ ವಿಭಕ್ತ ಕುಟುಂಬದ 6.7% ದಷ್ಟು ಜನರು ಹೌದು ಎಂದು 93.3% ಜನರು ಇಲ್ಲ ಎಂಬುದಾಗಿಯೂ ಪ್ರತಿಕ್ರೀಯಿಸಿದ್ದಾರೆ.

ಮೇಲಿನ ಸಾಂಖೀಕ ವಿಶ್ಲೇಷಣೆಯಿಂದ ಒಟ್ಟಾರೆ ತಿಳಿದುಬರುವುದೇನೆಂದರೆ ಎರಡು ಕುಟುಂಬಗಳಲ್ಲಿನ ಸದಸ್ಯರ ಪ್ರತಿಕ್ರಿಯೆ ಈ ಹೇಳಿಕೆಗೆ ಸಂಬಂಧಿಸಿದಂತೆ ಕ್ರಮವಾಗಿ 26.7% ದಷ್ಟು ಹಾಗೂ 6.7% ದಷ್ಟು ಸದಸ್ಯರು ಶಾಲಾ ಅವಧಿಯಲ್ಲಿ ಹೆಣ್ಣು ಮಕ್ಕಳಿಗೆ ಮನೆಗೆಲಸ ಹೇಳುವುದಿಲ್ಲ. ಕಾರಣ ಕುಟುಂಬದಲ್ಲಿನ ಸದಸ್ಯರು ಶಿಕ್ಷಣದ ಬಗ್ಗೆ ಅರಿವನ್ನು ಹೊಂದಿರುವುದು ತಿಳಿದು ಬರುವುದು.

### 11. ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ಹೆಣ್ಣು ಮಕ್ಕಳಿಗೆ ಅನುಮತಿ ನೀಡುತ್ತೀರಾ?

**ಕೋಷ್ಟಕ 11 :** ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ಹೆಣ್ಣು ಮಕ್ಕಳಿಗೆ ಅನುಮತಿ ನೀಡುತ್ತೀರಾ ಎಂಬುವ ದತ್ತಾಂಶಗಳನ್ನು ತೋರಿಸುವ ಕೋಷ್ಟಕ

| | ಅವಿಭಕ್ತ ಕುಟುಂಬ | ವಿಭಕ್ತ ಕುಟುಂಬ |
|---|---|---|
| Yes | 11(73.3) | 12(80) |
| No | 4(26.7) | 3(20) |
| Total | 15(100) | 15(100) |

ಆವರಣದಲ್ಲಿರುವುದು ಪ್ರತಿಶತವನ್ನು ಪ್ರದರ್ಶಿಸುತ್ತದೆ

ಮೇಲಿನ ಕೋಷ್ಟಕ 11 ರಲ್ಲಿ ಅವಿಭಕ್ತ ಕುಟುಂಬ ವಿಭಕ್ತ ಕುಟುಂಬದ ಸದಸ್ಯರು ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ಹೆಣ್ಣು ಮಕ್ಕಳಿಗೆ ಅನುಮತಿ ನೀಡುತ್ತೀರಾ ಎಂಬ ಹೇಳಿಕೆಗೆ ಪ್ರತಿಕ್ರಿಯೆ ಇದೆ.

ಅವಿಭಕ್ತ ಕುಟುಂಬದ 73.3% ದಷ್ಟು ಜನರು ಹೌದು ಎಂಬುದಾಗಿಯೂ 26.7% ದಷ್ಟು ಜನರು ಇಲ್ಲ ಎಂಬುದಾಗಿಯೂ ಹಾಗೆಯೇ ವಿಭಕ್ತ ಕುಟುಂಬದ 80% ದಷ್ಟು ಜನರು ಹದು ಎಂಬುದಾಗಿಯೂ ಪ್ರತಿಕ್ರಿಯಿಸಿದ್ದಾರೆ.

ಮೇಲಿನ ಸಾಂಖೀಕ ವಿಶ್ಲೇಷಣೆಯಿಂದ ತಿಳಿದುಬರುವುದೇನೆಂದರೆ ಎರಡು ಕುಟುಂಬಗಳಲ್ಲಿನ ಸದಸ್ಯರು ಕ್ರಮವಾಗಿ ಈ ಹೇಳಿಕೆಗೆ ಸಂಬಂಧಿಸಿದಂತೆ 73.3% ದಷ್ಟು ಹಾಗೂ 80% ದಷ್ಟು ಸದಸ್ಯರು ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ಹೆಣ್ಣು ಮಕ್ಕಳಿಗೆ ಅನುಮತಿ ನೀಡಿದ್ದು ವಿಭಕ್ತ ಕುಟುಂಬದ ಸದಸ್ಯರು ಅವಿಭಕ್ತ ಕುಟುಂಬದ ಸದಸ್ಯರಿಗಿಂತ ಹೆಚ್ಚು ಉದಾರತೆಯಿಂದ ಅನುಮತಿಯನ್ನು ನೀಡಿರುವುದನ್ನು ಕಾಣಬಹುದು.

### ಉಪಸಂಹಾರ

ಮೇಲಿನ ಉದ್ದೇಶಕ್ಕನುಗುಣವಾಗಿ ಎರಡು ಕುಟುಂಬದಲ್ಲಿನ ಎಲ್ಲಾ ಸದಸ್ಯರು ಶಿಕ್ಷಿತರಾಗಿದ್ದು, ವಿಭಕ್ತ ಕುಟುಂಬದಲ್ಲಿನ ಸದಸ್ಯರು ಅವಿಭಕ್ತ ಕುಟುಂಬದ ಸದಸ್ಯರಿಗಿಂತ ಹೆಚ್ಚು ಶಿಕ್ಷಿತರಾಗಿದ್ದಾರೆ. ಗಂಡು ಮಕ್ಕಳ ಸಮಾನವಾಗಿ ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆಯಬೇಕು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಪೂರ್ಣ ಆದ್ಯತೆಯನ್ನು ನೀಡಿದ್ದಾರೆ. ಎರಡು ಕುಟುಂಬದ ಸದಸ್ಯರು ಹೆಣ್ಣು ಮಕ್ಕಳು ಸಹ ಗಂಡು ಮಕ್ಕಳಂತೆ ಉನ್ನತ ಹಾಗೂ ವೃತ್ತಿ ಶಿಕ್ಷಣದ ಕೋರ್ಸುಗಳನ್ನು ಪಡೆಯಬೇಕು ಎಂಬ ಆಸೆ ಇಟ್ಟುಕೊಂಡಿದ್ದಾರೆ. ಹೆಣ್ಣು ಮಕ್ಕಳು ಉತ್ತಮ ಫಲಿತಾಂಶ ಗಳಿಸಿದಾಗ ಅಭಿನಂದಿಸುತ್ತಾರೆ. ಎರಡು ಕುಟುಂಬದ ಸದಸ್ಯರು ಒಂದೇ ಮನೋಭಾವವನ್ನು ಹೊಂದಿದ್ದಾರೆ. ವಿಭಕ್ತ ಕುಟುಂಬದ ಸದಸ್ಯರು ಮಗಳು ಮಾಡುವ ಎಲ್ಲಾ ಕೆಲಸಗಳ ಬಗ್ಗೆ ವಿಶೇಷ ಕಾಳಜಿ ವಹಿಸುವಷ್ಟು ಅವಿಭಕ್ತ ಕುಟುಂಬದ ಸದಸ್ಯರು ವಹಿಸುತ್ತಿಲ್ಲ. ಕಾರಣ ಕೂಲಿ ಕೆಲಸ ಹಾಗೂ ಕೃಷಿ ಕೆಲಸ ಮಾಡುತ್ತಿರುವದರಿಂದ ವಿಶೇಷ ಕಾಳಜಿ ವಹಿಸಲು ಆಗುತ್ತಿಲ್ಲ. ಮಗಳು ಓದುವ ಹವ್ಯಾಸಕ್ಕೆ ವಿಭಕ್ತ ಕುಟುಂಬದ ಸದಸ್ಯರು ಪ್ರೋತ್ಸಾಹ ನೀಡುವಷ್ಟು ಅವಿಭಕ್ತ ಕುಟುಂಬದ ಸದಸ್ಯರು ನೀಡುತ್ತಿಲ್ಲ ಕಾರಣ ಮೂಲಭೂತ ಶಿಕ್ಷಣವನಷ್ಟೇ ನೀಡುತ್ತಿದ್ದಾರೆ. ಮಗಳು ಉತ್ತಮ ಫಲಿತಾಂಶ ಗಳಿಸದಿದ್ದರೆ ಶಾಲೆಯನ್ನು ಅರ್ಧಕ್ಕೆ ಬಿಡಿಸಿ ತಮ್ಮ ಕೆಲಸ ಕಾರ್ಯಗಳಿಗೆ ಅವಿಭಕ್ತ ಕುಟುಂಭದ ಸದಸ್ಯರು ಹೆಚ್ಚು ಬಳಸಿಕೊಳ್ಳುತ್ತಿದ್ದಾರೆ. ಇಲ್ಲವೇ ಶಿಕ್ಷೆಯನ್ನು ನೀಡುತ್ತಾರೆ. ಕಾರಣ ಶಿಕ್ಷೆಯ ಮೂಲಕ ಉತ್ತಮ ಶಿಕ್ಷಣ ಕಲಿಯಬಹುದು ಎಂದು ನಂಬಿದ್ದಾರೆ. ಕುಟುಂಬದ ಸದಸ್ಯರು ಶಿಕ್ಷಣದ ಅರಿವನ್ನು ಹೊಂದಿದವರಾಗಿದ್ದು ಶಾಲಾ ಅವಧಿಯಲ್ಲಿ ಮಕ್ಕಳಿಗೆ ಮನೆಗೆಲಸವನ್ನು ಹೇಳುವುದಿಲ್ಲ.

ಅವಿಭಕ್ತ ಮತ್ತು ವಿಭಕ್ತ ಕುಟುಂಬದ ಸದಸ್ಯರು ಶಿಕ್ಷಣದ ಬಗ್ಗೆ ಅರಿವು ಹೊಂದಿದ್ದು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಧನಾತ್ಮಕ ಮನೋಭಾವ ಹೊಂದಿದ್ದಾರೆ.

### ಉದ್ದೇಶ 2 : ಅವಿಭಕ್ತ ಮತ್ತು ವಿಭಕ್ತ ಕುಟುಂಬದ ಆರ್ಥಿಕ ಸ್ಥಿತಿಯನ್ನು ಅರಿತುಕೊಳ್ಳಲು.

ಮೇಲಿನ ಉದ್ದೇಶಕ್ಕನುಗುಣವಾಗಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬದ ಸದಸ್ಯರು ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಮರ್ಥರಾಗಿದ್ದು ಅವಿಭಕ್ತ ಕುಟುಂಬದ ಸದಸ್ಯರಿಗಿಂತ ವಿಭಕ್ತ ಕುಟುಂಬದ ಸದಸ್ಯರು ಹೆಚ್ಚು ಸಮರ್ಥರಾಗಿದ್ದು ಶಿಕ್ಷಣದ ಬಗ್ಗೆ ಹೆಚ್ಚು ತಿಳುವಳಿಕೆ ಹೊಂದಿದ್ದಾರೆ. ವಿಭಕ್ತ ಕುಟುಂಬದ ಮಕ್ಕಳಿಗಿಂತ ಅವಿಭಕ್ತ ಕುಟುಂಬದ ಮಕ್ಕಳಿಗೆ ಎಲ್ಲ ಹಂತದ ಶಿಕ್ಷಣ ಸುಲಭವಾಗಿ ಸಿಗುತ್ತಿಲ್ಲ ಕಾರಣ ಮೂಲ ಉದ್ಯೋಗದ ಮೇಲೆ ಸದಸ್ಯರು

ಅವಲಂಭಿತರಾಗಿರುವುದು. ಅವಿಭಕ್ತ ಕುಟುಂಬದ ಸದಸ್ಯರು ವಿಭಕ್ತ ಕುಟುಂಬದ ಸದಸ್ಯರಿಗಿಂತ ಹೆಚ್ಚು ಪ್ರಮಾಣದಲ್ಲಿ ಮಗಳನ್ನು ಹಣದ ತೊಂದರೆಯಾದಾಗ ಶಾಲೆ ಬಿಡಿಸಿ ಕೆಲಸಕ್ಕೆ ಕಳುಹಿಸುತ್ತಾರೆ. ಕಾರಣ ಬಡತನ ಹಾಗೂ ಕೆಲಸದ ಒತ್ತಡವಾಗಿದೆ. ಅವಿಭಕ್ತ ಕುಟುಂಬದ ಸದಸ್ಯರಿಗಿಂತ ವಿಭಕ್ತ ಕುಟುಂಬದ ಸದಸ್ಯರು ಮಗಳ ಶಿಕ್ಷಣಕ್ಕೆ ಉತ್ತಮ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ವಿಭಕ್ತ ಕುಟುಂಬದ ಸದಸ್ಯರು ಅವಿಭಕ್ತ ಕುಟುಂಬದ ಸದಸ್ಯರಿಗಿಂತ ಹೆಚ್ಚು ಪ್ರಮಾಣದಲ್ಲಿ ಮಗಳನ್ನು ಉದ್ಯೋಗಕ್ಕೆ ಕಳುಹಿಸುವಲ್ಲಿ ಆಸಕ್ತಿ ಹೊಂದಿದ್ದು ಕಾರಣ ಸ್ವಾವಲಂಬಿಯಾಗಿ ಮಗಳು ಬದುಕಬೇಕು ಎಂದಿದ್ದಾರೆ.

ಈ ಮೇಲೆ ನೋಡಿದಂತೆ ಅವಿಭಕ್ತ ಮತ್ತು ವಿಭಕ್ತ ಕುಟುಂಬದ ಸದಸ್ಯರುಗಳು ಅರ್ಥಿಕ ಸ್ಥಿತಿಯು ಹೆಚ್ಚು ಕಡಿಮೆಯಾಗಿದ್ದು ಅವಿಭಕ್ತ ಕುಟುಂಬದ ಸದಸ್ಯರು ಬೇಸಾಯದ ಮೇಲೆ ಅವಲಂಬಿತರಾಗಿರುವುದು ಕಂಡು ಬರುತ್ತದೆ.

**ಆಧಾರ ಗ್ರಂಥಗಳು**


1. ಬಸಪ್ಪ.ಎ. (2007) – ಶೈಕ್ಷಣಿಕ ಸಂಶೋಧನಾ ವಿಧಾನ, ಮದಕರಿ ಪ್ರಕಾಶನ, ಚಿತ್ರದುರ್ಗ.
2. ಸಿ.ವಿ.ಜಯಣ್ಣ (2005) – ಆಧುನಿಕ ಶಿಕ್ಷಣದ ಒಲವುಗಳು, ಸಪ್ನ ಬುಕ್ ಹೌಸ, ಬೆಂಗಳೂರು.
3. ಚ.ನ.ಶಂಕರರಾವ(1997) – ಸಾಮಾಜಿಕ ಸಂಶೋಧನೆಯ ಕೈಪಿಡಿ, ಭಾರತ ಪ್ರಕಾಶನ, ಮಂಗಳೂರು.
4. ಚ.ನ.ಶಂಕರರಾವ (2006) – ಭಾರತೀಯ ಸಮಾಜ ಸಂರಚನೆ ಮತ್ತು ಸಮಾಜ, ಜೈಭಾರತ ಪ್ರಕಾಶನ, ಮಂಗಳೂರು.
5. ಬಸಪ್ಪ.ಎ.(2007) – ಶೈಕ್ಷಣಿಕ ಸಂಶೋಧನಾ ವಿಧಾನ, ಮದಕರಿ ಪ್ರಕಾಶನ, ಚಿತ್ರದುರ್ಗ.
6. ಸಿ.ವಿ.ಜಯಣ್ಣ (2005) – ಆಧುನಿಕ ಶಿಕ್ಷಣದ ಒಲವುಗಳು, ಸಪ್ನ ಬುಕ್ ಹೌಸ, ಬೆಂಗಳೂರು.
7. ಚ.ನ.ಶಂಕರರಾವ(1997) – ಸಾಮಾಜಿಕ ಸಂಶೋಧನೆಯ ಕೈಪಿಡಿ, ಭಾರತ ಪ್ರಕಾಶನ, ಮಂಗಳೂರು.
8. ಚ.ನ.ಶಂಕರರಾವ (2006) – ಭಾರತೀಯ ಸಮಾಜ ಸಂರಚನೆ ಮತ್ತು ಸಮಾಜ, ಜೈಭಾರತ ಪ್ರಕಾಶನ, ಮಂಗಳೂರು.
9. ಜಂತಲಿ.ಆರ್.ಟಿ (1993) – ಭಾರತದಲ್ಲಿ ಶಿಕ್ಷಣ ಹಾಗೂ ಪ್ರಚಲಿತ ಸಮಸ್ಯೆಗಳು, ಭಾರತ ಬುಕ್ ಡಿಪೊ ಮತ್ತು ಪ್ರಕಾಶನ ಧಾರವಾಡ.
10. ಗಿರಡ್ಡಿ ಆಯ್. ಎಸ್. (1989) – ಶ್ರೇಷ್ಠ ಶಿಕ್ಷಣ ತಜ್ಞರು, ವಿವೇಕ ಪ್ರಕಾಶನ, ಲಿಂಗಸಗೂರು.
11. ಗಂಗಾಧರಪ್ಪ.ಎನ್.ಆರ್. – ಶಿಕ್ಷಣ ಶಾಸ್ತ್ರ ಪರಿಚಯ ಭಾಗ 3, ರೇಖಾ ಪ್ರಕಾಶನ, ದಾವಣಗೆರೆ.